ಮಾದರಿ ಪ್ರಶ್ನೆಪತ್ರಿಕೆ – 2ರ ಮಾದರಿ ಉತ್ತರಗಳು : 2021-22 ಗರಿಷ್ಠ ಅಂಕಗಳು : 80

ತರಗತಿ : 10 ವಿಷಯ : ವಿಜ್ಞಾನ

## ಭಾಗ : A ಭೌತವಿಜ್ಞಾನ

| Qn. No. | Key Answer | Marks |
|---|---|---|
| 1 | d) 30 J | 1 |
| 2 | a) 1/v + 1/u | 1 |
| 3 | b) ಮೋಡಕವಿದ ದಿನ | 1 |
| 4 | ಅಲ್ಯೂಮಿನಿಯಂ ಮತ್ತು ತಾಮ್ರದ ರೋಧಶೀಲತೆಯು ಕಡಿಮೆ. ಇದರಿಂದ ಪ್ರಸರಣಾ ನಷ್ಟ ಕನಿಷ್ಟಗೊಳಿಸಬಹುದು | 1 |
| 5 | ವಿದ್ಯುತ್ ಪ್ರವಾಹದ ದಿಕ್ಕು ಕಾಂತ ಕ್ಷೇತ್ರದ ದಿಕ್ಕಿಗೆ ಲಂಬವಾಗಿದ್ದಾಗ | 1 |
| 6 | ಹೆಚ್ಚು ಶಾಖವನ್ನು ಹೀರಿಕೊಳ್ಳಲು | 1 |
| 7 | <br> | 2 |
| 8 | **ಫ್ಲೆಮಿಂಗ್‌ನ ಬಲಗೈ ನಿಯಮ :** ಬಲಗೈನ ಹೆಬ್ಬೆರಳು ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರಿಸಿದಾಗ, ತೋರು ಬೆರಳು ಕಾಂತ ಕ್ಷೇತ್ರದ ದಿಕ್ಕನ್ನು, ಹೆಬ್ಬೆರಳು ವಾಹಕದ ಚಲನೆಯ ದಿಕ್ಕನ್ನು ಮತ್ತು ಮಧ್ಯದ ಬೆರಳು ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸುತ್ತದೆ.<br>**ಅಥವಾ**<br>ವಿದ್ಯುತ್ ಮಂಡಲದಲ್ಲಿ ಹ್ರಸ್ವ ಮಂಡಲ ಉಂಟಾಗುವುದು<br>• ಸಜೀವ ತಂತಿ ಮತ್ತು ತಟಸ್ಥ ತಂತಿ ನೇರ ಸಂಪರ್ಕಕ್ಕೆ ಬಂದಾಗ.<br>• ವಿದ್ಯುತ್ ಉಪಕರಣದಲ್ಲಿ ಯಾವುದಾದರೂ ದೋಷವಿದ್ದರೆ<br>• ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸಿದ್ದಾಗ | 2 |
| 9 | f = -20cm  v = -15cm  u= ?<br>**1/f = 1/v -1/u**<br>1/-20 = 1/-15 - 1/u<br>1/u =1/-15 - 1/20<br>1/u = -1/60<br>**u =-60cm**<br>**m = v/u**<br>= -15/-60<br>= 1/4 | 3 |

<table>
<tr><td>10</td><td>
</td><td>3</td></tr>
<tr><td>11</td><td>ಉತ್ತಮ ಶಕ್ತಿಯ ಆಕರಗಳ ಲಕ್ಷಣಗಳು :<br>• ದಕ್ಷತೆ ಹೆಚ್ಚಿರಬೇಕು<br>• ಸುಲಭವಾಗಿ ದೊರೆಯಬೇಕು<br>• ಸುಲಭವಾಗಿ ಸಂಗ್ರಹಿಸಲು ಮತ್ತು ಸಾಗಿಸಲು ಸಾಧ್ಯವಾಗಬೇಕು<br>• ಕಡಿಮೆ ಹೊಗೆ ಉತ್ಪತ್ತಿಯಾಗಬೇಕು<br>ಪಳೆಯುಳಿಕೆ ಇಂಧನಗಳ ದಹನದಿಂದ ಉಂಟಾಗುವ ಅನಾನುಕೂಲ<br>• ವಾಯುಮಾಲಿನ್ಯ ಉಂಟಾಗುತ್ತದೆ<br>• ಆಮ್ಲಗಳು ಉಂಟಾಗಿ ಮಣ್ಣು ಮತ್ತು ನೀರಿನ ಮಾಲಿನ್ಯ<br>ಅಥವಾ<br>ಗಾಳಿಯಂತ್ರದ ಅನಾನುಕೂಲ :<br>• ಗಾಳಿಯ ವೇಗ 15 ಕಿಲೋಮೀಟರ್/ಗಂಟೆ ಗಿಂತ ಜಾಸ್ತಿ ಇರಬೇಕು<br>• ಗಾಳಿಯಂತ್ರಗಳ ಸ್ಥಾಪನೆ ವೆಚ್ಚ ಅಧಿಕ<br>ಅಲೆಗಳ ಶಕ್ತಿಯ ಅನಾನುಕೂಲ :<br>• ಇವುಗಳ ವಾಣಿಜ್ಯ ಬಳಕೆ ಕಷ್ಟವಾಗಿದೆ<br>• ಬಲಿಷ್ಠ ಅಲೆಗಳಿದ್ದಲ್ಲಿ ಮಾತ್ರ ಅಲೆಗಳು ಸಮರ್ಥ ಶಕ್ತಿ ಆಕರವಾಗುತ್ತದೆ<br>ಉಬ್ಬರ ಶಕ್ತಿಯ ಅನಾನುಕೂಲ :<br>• ಉಬ್ಬರಗಳು ಕಡಿಮೆ ಇದ್ದಾಗ ವಿದ್ಯುತ್ ಉತ್ಪಾದನೆ ಕಡಿಮೆ<br>• ಅಣೆಕಟ್ಟುಗಳ ಕಟ್ಟುವ ಸ್ಥಳ ಸೀಮಿತವಾಗಿದೆ</td><td>3</td></tr>
<tr><td>12</td><td>a) ಬೆಳಕಿನ ಕಿರಣವು ಲಂಬದ ಕಡೆಗೆ ಬಾಗುತ್ತದೆ .<br>ಏಕೆಂದರೆ ಬೆಳಕಿನ ಕಿರಣವು ವಿರಳ ಮಾಧ್ಯಮದಿಂದ ಸಾಂಧ್ರ ಮಾಧ್ಯಮದ ಕಡೆಗೆ ಚಲಿಸುವಾಗ ಅದು ಲಂಬದ ಕಡೆಗೆ ಬಾಗುತ್ತದೆ. ಇಲ್ಲಿ ಗಾಳಿ ವಿರಳ ಮಾಧ್ಯಮ ಮತ್ತು ನೀರು ಸಾಂದ್ರ ಮಾಧ್ಯಮವಾದ ಕಾರಣ ಗಾಳಿಯಿಂದ ನೀರನ್ನು ಪ್ರವೇಶಿಸುವಾಗ ಬೆಳಕಿನ ಕಿರಣವು ಲಂಬದ ಕಡೆಗೆ ಬಾಗುತ್ತದೆ .<br>b) ವಕ್ರತಾ ತ್ರಿಜ್ಯ ( R ) =32ಸೆ.ಮೀ<br>R = 2f (f = ಸಂಗಮದೂರ)<br>f = R/2<br>= 32/2<br>= 16 cm</td><td>4</td></tr>
<tr><td>13</td><td>a) ಹೌದು ಸಮಾನ ಪ್ರಮಾಣದಲ್ಲಿ ಬೆಳಗುತ್ತದೆ. ಏಕೆಂದರೆ ಸರಣಿ ಕ್ರಮದಲ್ಲಿ ವಿದ್ಯುತ್ ಮಂಡಲದ ಎಲ್ಲಾ ಭಾಗದಲ್ಲಿ ವಿದ್ಯುತ್ ಪ್ರವಾಹ ಸ್ಥಿರವಾಗಿರುತ್ತದೆ<br>b) ಮಂಡಲವು ಮುರಿದುಹೋಗುತ್ತದೆ. ಬೇರೆ ಬಲ್ಬ್‌ಗಳು ಬೆಳಗುವುದಿಲ್ಲ.<br>c) ಸಮಾಂತರವಾಗಿ ಸಂಪರ್ಕಿಸಬಹುದು<br>d) ಸಮಾಂತರವಾಗಿ</td><td>5</td></tr>
</table>

## PART B : CHEMISTRY

| Qn. No. | Key Answer | Marks |
|---|---|---|
| 14 | b) HCl ನಲ್ಲಿ ಹಳದಿ ಮತ್ತು NaOH ನಲ್ಲಿ ಕೆಂಪು | 1 |
| 15 | c) 3 | 1 |
| 16 | c) ಮೆಂಡಲೀವ್ | 1 |
| 17 | ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಪಡೆದುಕೊಂಡರೆ / ಹೈಡ್ರೋಜನ್ ಕಳೆದುಕೊಂಡರೆ / ಇಲೆಕ್ಟ್ರಾನ್ ಕಳೆದುಕೊಂಡರೆ, ಅದು ಉತ್ಕರ್ಷಣಗೊಂಡಿದೆ ಎನ್ನುತ್ತೇವೆ. | 1 |
| 18 | ಕಾರ್ಬನ್ ಡೈಆಕ್ಸೈಡ್ ($CO_2$), ಬಿಳಿಯ ಪ್ರಕ್ಷೇಪ | 1 |
| 19 | ಏಕೆಂದರೆ ಆಲ್ಕೀನ್‌ಗಳಲ್ಲಿ ಕಾರ್ಬನ್ ಪರಮಾಣುಗಳ ನಡುವೆ ದ್ವಿಬಂಧವಿರುತ್ತದೆ. | 1 |
| 20 | ಆಮ್ಲೀಯ ಲವಣಗಳು : ಅಮೋನಿಯಂ ಕ್ಲೋರೈಡ್<br>ಪ್ರತ್ಯಾಮ್ಲೀಯ ಲವಣಗಳು : ಸೋಡಿಯಂ ಕಾರ್ಬೋನೇಟ್<br>ತಟಸ್ಥ ಲವಣಗಳು : ಪೊಟಾಸಿಯಮ್ ಸಲ್ಫೇಟ್, ಸೋಡಿಯಂ ಕ್ಲೋರೈಡ್ | 2 |
| 21 | ಕೆಲವು ಧಾತುಗಳ ಹೊರಕವಚಗಳು ಇಲೆಕ್ಟ್ರಾನ್‌ಗಳನ್ನು ಪಡೆದುಕೊಂಡು ವಿದ್ಯುತ್‌ಋಣೀಯ ಪರಮಾಣುಗಳಾಗುತ್ತವೆ.<br>ಆವರ್ತದ ಮುಂದೆ ಸಾಗಿದಂತೆ ವಿದ್ಯುತ್ ಋಣೀಯತೆ ಹೆಚ್ಚಾಗುತ್ತದೆ, ವರ್ಗದ ಗುಂಟ ಸಾಗಿದಂತೆ ಕಡಿಮೆಯಾಗುತ್ತದೆ. | 2 |
| 22 |  | 2 |
| 23 | ವಿಭಜನ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ವಿಭಜನೆಗೊಂಡು 2 ಅಥವಾ ಹೆಚ್ಚು ಉತ್ಪನ್ನಗಳನ್ನು ನೀಡುತ್ತದೆ.<br>ಉದಾಹರಣೆ : $CaCO_3 \longrightarrow CaO + CO_2$<br>ಸಂಯೋಗ ಕ್ರಿಯೆಯಲ್ಲಿ 2 ಅಥವಾ ಹೆಚ್ಚು ಪ್ರತಿವರ್ತಕಗಳು ಸಂಯೋಗವಾಗಿ ಒಂದು ಉತ್ಪನ್ನ ನೀಡುತ್ತದೆ.<br>ಉದಾಹರಣೆ : $CaO + H_2O \rightarrow Ca(OH)_2$ | 3 |
| 24 |  | 3 |

<table>
<tr><td>25</td><td>ಅಯಾನಿಕ್ ಸಂಯುಕ್ತಗಳು,<br>• ಕಠಿಣವಾಗಿರುತ್ತವೆ.<br>• ಹೆಚ್ಚಿನ ಕರಗುವ ಮತ್ತು ಕುದಿಬಿಂದುಗಳನ್ನು ಹೊಂದಿವೆ.<br>• ನೀರಿನಲ್ಲಿ ವಿಲೀನವಾಗುತ್ತವೆ ಆದರೆ ಸಾವಯವ ದ್ರಾವಕಗಳಲ್ಲಿ ವಿಲೀನವಾಗುವುದಿಲ್ಲ.<br>• ಜಲೀಯ / ದ್ರವ ಸ್ಥಿತಿಯಲ್ಲಿ ತಮ್ಮ ಮೂಲಕ ವಿದ್ಯುತ್ ಅನ್ನ ಹರಿಯಬಿಡುತ್ತವೆ.<br>ನೀರಿನೊಂದಿಗೆ ಆಮ್ಲವನ್ನು ನೀಡುವ ಆಕ್ಸೈಡ್‌ಗಳನ್ನು ಆಮ್ಲೀಯ ಆಕ್ಸೈಡ್‌ಗಳು ಎನ್ನುವರು.<br>ಅಥವಾ<br>• ಲೋಹಗಳನ್ನು ಅವುಗಳ ಕ್ರಿಯಾಶೀಲತೆಯ ಇಳಿಕೆ ಕ್ರಮದಲ್ಲಿ ಜೋಡಿಸಿದ ಪಟ್ಟಿಯೇ ಲೋಹಗಳ ಕ್ರಿಯಾಶೀಲತೆಯ ಸರಣಿ.<br>• ಮೆಗ್ನೀಷಿಯಂ > ಸತು > ಕಬ್ಬಿಣ > ತಾಮ್ರ<br>• ನೀರಿನೊಂದಿಗೆ ಪ್ರತ್ಯಾಮ್ಲವನ್ನು ನೀಡುವ ಆಕ್ಸೈಡ್‌ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್‌ಗಳು ಎನ್ನುವರು.</td><td>3</td></tr>
<tr><td>26</td><td>a) ಈಥೈನ್ $H-C\equiv C-H$<br>b) ಪ್ರೊಪೀನ್<br><br>c) ಐಸೋ ಬ್ಯೂಟೇನ್<br><br>d) ಸೈಕ್ಲೋಹೆಕ್ಸೇನ್<br><br>------------------------OR------------------------<br>a) ಬ್ರೋಮೋ ಪ್ರೊಪೇನ್<br><br>b) ಪ್ರೋಪೇನೋನ್<br><br>c) ಮೆಥನ್ಯಾಲ್<br><br>d) ಬ್ಯೂಟೈನ್<br></td><td>4</td></tr>
</table>

## PART C : BIOLOGY

<table>
<tr><th>Qn. No.</th><th>Key Answer</th><th>Marks</th></tr>
<tr><td>27</td><td>b) XY</td><td>1</td></tr>
<tr><td>28</td><td>d) ಮರುಚಕ್ರೀಕರಣಗೊಳಿಸುವುದು</td><td>1</td></tr>
<tr><td>29</td><td>ಜೀವಿಗಳಲ್ಲಿ ಸಹಭಾಗಿತ್ವ ನಿರ್ನಾಳ ಗ್ರಂಥಿಗಳು ಹಾಗೂ ನರವ್ಯೂಹ ವ್ಯವಸ್ಥೆಯಿಂದ ನಡೆಯುತ್ತದೆ.</td><td>1</td></tr>
<tr><td>30</td><td>ಸೈಟೋಕೈನಿನ್‌ಗಳು</td><td>1</td></tr>
<tr><td>31</td><td>* ಓಝೋನ್ ಪದರದ ನಾಶದಿಂದಾಗಿ ಪರಿಸರದಲ್ಲಿನ ಜೀವಿಗಳಿಗೆ ಹಾನಿಯಾಗಿದೆ.<br>* ಮನುಷ್ಯನ ರೋಗ ನಿರೋಧಕತೆ ಶಕ್ತಿ ಕುಂದಿದೆ.<br>* ಚರ್ಮದ ಕ್ಯಾನ್ಸರ್ ನಂತಹ ಹಾನಿಕಾರಕ ಪರಿಣಾಮಗಳು ಉಂಟಾಗುತ್ತಿವೆ.<br>* ಕ್ಯಾಟರ್‍ಯಾಕ್ಟ್ ಹೆಚ್ಚಾಗುವ ಸಾಧ್ಯತೆಗಳಿವೆ.<br>ಈ ಎಲ್ಲಾ ಕಾರಣಗಳಿಂದಾಗಿ ಸರ್ಕಾರವು CFC ಮುಕ್ತ ರೆಫ್ರಿಜರೇಟರ್ ಬಳಕೆ ಮಾಡಲು ಆದೇಶಿಸಿದೆ.</td><td>2</td></tr>
<tr><td>32</td><td>
</td><td>2</td></tr>
<tr><td>33</td><td>ರಚನೆಯ ಮೂಲ ಒಂದೇ ಆಗಿದ್ದು ವಿಭಿನ್ನ ರೀತಿಯ ಕಾರ್ಯವನ್ನು ಹೊಂದಿರುವ ಅಂಗಗಳಿಗೆ ರಚನಾನುರೂಪಿ ಅಂಗಗಳೆನ್ನುವರು.<br>ಉದಾ: ಹಕ್ಕಿಗಳು, ಸರೀಸೃಪಗಳು, ಉಭಯವಾಸಿಗಳು ಹಾಗೂ ಸ್ತನಿಗಳ ಕಾಲುಗಳು.<br>ಅಥವಾ<br>1) ರಚನಾನುರೂಪಿ ಅಂಗಗಳ ಅಧ್ಯಯನ<br>2) ಕಾರ್ಯಾನುರೂಪಿ ಅಂಗಗಳ ಅಧ್ಯಯನ<br>3) ಪಳೆಯುಳಿಕೆಗಳ ಅಧ್ಯಯನ<br>4) ಸಾಮ್ಯತೆ ಮತ್ತು ಭಿನ್ನತೆಗಳ ಹೋಲಿಕೆ<br>5) ಡಿ.ಎನ್.ಎ. ಬದಲಾವಣೆಗಳ ಅಂದಾಜಿಸುವುದು<br>6) ಉತ್ಖನನ<br>7) ಕಾಲನಿರ್ಣಾಯ ಮತ್ತು<br>8) ಡಿಎನ್‌ಎ ಅನುಕ್ರಮಣಿಕೆ (ಯಾವುದಾದರೂ 4)</td><td>2</td></tr>
<tr><td>34</td><td>ರಕ್ತನಾಳಗಳು — ಕಾರ್ಯಗಳು<br>ಅಪಧಮನಿಗಳು → ಇವು ಹೃದಯದಿಂದ ರಕ್ತವನ್ನು ದೇಹದ ಎಲ್ಲಾ ಭಾಗಗಳಿಗೆ ಸಾಗಿಸುತ್ತವೆ<br>ಅಭಿಧಮನಿಗಳು → ಇವು ದೇಹದ ಎಲ್ಲಾ ಭಾಗಗಳಿಂದ ರಕ್ತವನ್ನು ಹೃದಯಕ್ಕೆ ಸಾಗಿಸುತ್ತವೆ.<br>ಲೋಮನಾಳಗಳು → ರಕ್ತ ಮತ್ತು ಅದರ ಸುತ್ತಲಿನ ಕೋಶಗಳ ನಡುವೆ ವಸ್ತುಗಳ ವಿನಿಮಯ ನಡೆಯುತ್ತದೆ.</td><td>3</td></tr>
<tr><td>35</td><td><table><tr><th>ಅನೈಚ್ಛಿಕ ಕ್ರಿಯೆಗಳು</th><th>ಪರಾವರ್ತಿತ ಕ್ರಿಯೆಗಳು</th></tr><tr><td>• ಸ್ವಯಂ ನಿಯಂತ್ರಕ ನರವ್ಯೂಹವನ್ನು ಒಳಗೊಂಡಿದೆ<br>• ಹಿಮ್ಮಿದುಳಿನಿಂದ ನಿಯಂತ್ರಿಸಲ್ಪಡುತ್ತದೆ<br>• ನಿಧಾನವಾಗಿ ಪ್ರತಿಕ್ರಿಯೆ ನಡೆಯುತ್ತದೆ<br>• ಉದಾ: ಉಸಿರಾಟ ಹೃದಯ ಬಡಿತ</td><td>• ಐಚ್ಛಿಕ ನರವ್ಯೂಹದ ಎಲ್ಲಾ ಭಾಗಗಳನ್ನು ಒಳಗೊಂಡಿದೆ<br>• ಮಿದುಳು ಬಳ್ಳಿಯಿಂದ ನಿಯಂತ್ರಿಸಲ್ಪಡುತ್ತದೆ<br>• ಪ್ರತಿಕ್ರಿಯೆಯು ತುಂಬಾ ವೇಗವಾಗಿ ನಡೆಯುತ್ತದೆ<br>• ಉದಾ: ಬಿಸಿ ವಸ್ತು ಮುಟ್ಟಿದ ತಕ್ಷಣ ಕೈಯನ್ನು ಹಿಂದಕ್ಕೆ ಎಳೆದುಕೊಳ್ಳುವುದು</td></tr></table></td><td>3</td></tr>
</table>

| | | |
|---|---|---|
| | - ಅಥವಾ -<br>**a) ಮಹಾಮಸ್ತಿಷ್ಕ** – ಬುದ್ಧಿ ಶಕ್ತಿ ಕಲ್ಪನೆ ಭಾವನೆ ವಿವೇಚನೆ ಪ್ರಜ್ಞೆಯ ಕೇಂದ್ರ<br>**b) ಅನುಮಸ್ತಿಷ್ಕ** – ನಡೆಯುವ, ಓಡುವ ಚಲನೆಗೆ ಸ್ನಾಯುಗಳ ಹೊಂದಾಣಿಕೆ ಹಾಗೂ ದೇಹದ ಸಮತೋಲನ<br>**c) ಪಾನ್ಸ್** – ಆಹಾರ ಅಗಿಯುವುದು ಮುಖದ ಭಾವ ಉಸಿರಾಟ ಕ್ರಿಯೆಯ ನಿಯಂತ್ರಣ | |
| 36 | ನಿಶೇಚನ ಕ್ರಿಯೆಯು ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಅಂಡನಾಳ (ಫೆಲೋಪಿಯನ್ ನಾಳ)ದಲ್ಲಿ ನಡೆಯುತ್ತದೆ.<br>**ಅಂಡವು ಫಲಿತಗೊಂಡನಂತರ ಉಂಟಾಗುವ ಬದಲಾವಣೆಗಳು :**<br>1. ಅಂಡವು ಫಲಿತಗೊಂಡನಂತರ ಯುಗ್ಮಜ ಎಂಬ ರಚನೆ ಉಂಟಾಗುತ್ತದೆ.<br>2. ಯುಗ್ಮಜವು ವಿಭಜಿಸಲು ಪ್ರಾರಂಭಿಸುತ್ತದೆ ಮತ್ತು ಜೀವಕೋಶಗಳ ಗೋಳ (ಭ್ರೂಣಾಂಕುರ) ಉಂಟಾಗುತ್ತದೆ.<br>3. ಭ್ರೂಣಾಂಕುರವು ಗರ್ಭಕೋಶದ ಒಳಸ್ತರಿಯ ಮೇಲೆ ಅಂಟಿಕೊಳ್ಳುತ್ತದೆ.<br>4. ಗರ್ಭಕೋಶದಲ್ಲಿ ಭ್ರೂಣಾಂಕುರ ಬೆಳವಣಿಗೆಯನ್ನು ಮುಂದುವರೆಸಿ ಅಂಗಗಳನ್ನು ಬೆಳೆಸಿಕೊಂಡು ಭ್ರೂಣವಾಗುತ್ತದೆ.<br>ಅಥವಾ<br>ಹೆಣ್ಣು ಲಿಂಗಾಣು (ಅಂಡವು), ಗಂಡು ಲಿಂಗಾಣು (ವೀರ್ಯಾಣು) ಸಂಯೋಗ ಹೊಂದುವ ಕ್ರಿಯೆಗೆ ಫಲಿತಗೊಳ್ಳುವಿಕೆ ಎನ್ನುವರು.<br>**ಅಂಡವು ಫಲಿತಗೊಳ್ಳದಿದ್ದರೆ ಉಂಟಾಗುವ ಬದಲಾವಣೆಗಳು :**<br>1) ಅಂಡವು ಫಲಿತಗೊಳ್ಳದಿದ್ದರೆ ಒಂದು ದಿನದವರೆಗೆ ಮಾತ್ರ ಬದುಕಿರುತ್ತದೆ.<br>2) ಫಲಿತಗೊಂಡ ಅಂಡವನ್ನು ಬರಮಾಡಿಕೊಳ್ಳಲು ದಪ್ಪ ಸ್ಪಂಜಿನಂತಾಗಿರುವ ಗರ್ಭಕೋಶದ ಒಳಸ್ತರಿಯು ಅಗತ್ಯವಿರುವುದಿಲ್ಲ.<br>3) ಆದ್ದರಿಂದ ಈ ಒಳಸ್ತರಿಯು ನಿಧಾನವಾಗಿ ಬಿರುಕುಬಿಟ್ಟು ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರಬರುತ್ತದೆ.<br>4) ಇದನ್ನು ಋತುಚಕ್ರ ಎನ್ನುವರು. | 3 |
| 37 |  | 4 |
| 38 | a) * ಪಳೆಯುಳಿಕೆಗಳ ಅಂಗರಚನೆಯ ವಿಶ್ಲೇಷಣೆಯು ಜೀವವಿಕಾಸೀಯ ಸಂಬಂಧಗಳು ಹಳೆತನದ ವಯಸ್ಸನ್ನು ನಿರ್ಧರಿಸಲು ಸಹಾಯ ಮಾಡುತ್ತವೆ.<br>* ಸರಳವಾದ ರಚನೆಗಳಿಂದ ಸಂಕೀರ್ಣ ರಚನೆಗಳ ಉಂಟಾಗುವಿಕೆಯನ್ನು ತಿಳಿಸುತ್ತದೆ.<br>* ಪ್ರಭೇದಗಳ ನಡುವಿನ ಸಂಬಂಧವನ್ನು ತಿಳಿಸುತದೆ.<br>* ಹೊಸ ಮತ್ತು ಹಳೆಯ ಪ್ರಭೇದಗಳು ಉಂಟಾಗುವಿಕೆಯನ್ನು ತಿಳಿಸುತ್ತದೆ.<br>b) * ಗರಿಗಳು ಹಕ್ಕಿಗಳ ದೇಹವನ್ನು ಚಳಿಯಿಂದ ರಕ್ಷಿಸಲೆಂದೇ ಶುರುವಾಗಿ ನಂತರದಲ್ಲಿ ಇವು ಹಾರಲು ಉಪಯುಕ್ತವಾದವು.<br>* ಡೈನೋಸಾರಗಳು ಹಾರಲು ಅಸಮರ್ಥವಾಗಿದ್ದರೂ, ಗರಿಗಳನ್ನು ಹೊಂದಿದ್ದವು. ಹಕ್ಕಿಗಳು ಕಾಲಾನಂತರದಲ್ಲಿ ಗರಿಗಳನ್ನು ಬಳಸಿ ಹಾರಲು ಹೊಂದಿಕೊಂಡವು.<br>* ಡೈನೋಸಾರಗಳು ಸರೀಸೃಪಗಳೇ ಆಗಿದ್ದು ಆರ್ಕಿಯೋಪ್ಟೆರಿಕ್ಸ್ ಪಕ್ಷಿ ಮತ್ತು ಸರೀಸೃಪಗಳ ನಡುವಿನ ಕೊಂಡಿಗಳಾಗಿವೆ. | 4 |